# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ವಿಕ್ರಮ ಕನ್ನಡ ವಾರಪತ್ರಿಕೆ ಪ್ರಾರಂಭಗೊಂಡು 75 ಸಂವತ್ಸರಗಳು ಪೂರ್ಣಗೊಂಡ ಸುಸಂದರ್ಭದಲ್ಲಿ ಬೆಂಗಳೂರಿನ ಶಂಕರಪುರದ ರಂಗರಾವ್ ರಸ್ತೆಯಲ್ಲಿರುವ ಉತ್ತುಂಗ ಸಭಾಭವನದಲ್ಲಿ ಜುಲೈ 3 ರಂದು ಅಮೃತ ಸಂಭ್ರಮ ಕಾರ್ಯಕ್ರಮ ನಡೆಯಿತು.


ಸಂಪುಟ : 45 | ಸಂಚಿಕೆ : 7 | ಆಷಾಢ–ಅಧಿಕ ಶ್ರಾವಣ | ಕಲಿಯುಗಾಬ್ದ 5125 | 15–07–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಸೆಕ್ಯುಲರ್‌ವಾದ, ಏಕರೂಪ ನಾಗರಿಕ ಸಂಹಿತೆ ಮತ್ತು ಮುಸ್ಲಿಂ ವೈಯಕ್ತಿಕ ಕಾನೂನು

– ಷಣ್ಮುಖ ಎ

ಭಾರತೀಯ ಸಂವಿಧಾನದಂತೆ ಯಾವುದೇ ನಾಗರಿಕನನ್ನು ಆತನ ರಿಲಿಜನ್ನು ಮತ್ತು ಜಾತಿಯ ಆಧಾರದಲ್ಲಿ ಪ್ರಭುತ್ವ ತಾರತಮ್ಯ ಮಾಡುವಂತಿಲ್ಲ. ಹಾಗಾಗಿ ರಾಜ್ಯನಿರ್ದೇಶಕ ತತ್ವದಡಿಯಲ್ಲಿ ಏಕರೂಪ ನಾಗರಿಕ ಸಂಹಿತೆಯ ಜಾರಿಗೆ ಪ್ರಭುತ್ವವು ಬದ್ಧವಾಗಿರಬೇಕಿದೆ. ಆದರೆ ಮುಸ್ಲೀಮರು ಸೆಕ್ಯುಲರ್ ತತ್ವದಡಿ ತಮ್ಮ ವೈಯುಕ್ತಿಕ ಕಾನೂನನ್ನು ಅನುಸರಿಸುವುದು ರಿಲಿಜನ್ನಿನ ಸ್ವಾತಂತ್ರ್ಯವೆಂದು ವಾದಿಸುತ್ತಲೇ ಬರುತ್ತಿದ್ದಾರೆ. ಈ ಕಾರಣಕ್ಕೆ ಏಕರೂಪ ನಾಗರಿಕ ಸಂಹಿತೆಗೆ ಮುಸ್ಲೀಂ ಸಂಘಟನೆಗಳು ವಿರೋಧಿಸುತ್ತಲೇ ಬಂದಿದ್ದಾರೆ. ಅವರಿಗೆ ಬೆಂಬಲವಾಗಿ ಎಡಪಂಥೀಯ ಸೆಕ್ಯುಲರ್ ಚಿಂತಕರಿದ್ದಾರೆ.

ಆದರೆ ಅದೇ ಸಂದರ್ಭದಲ್ಲಿ ವಸಾಹತು ಪ್ರಭುತ್ವಕ್ಕಿಂತ ಇನ್ನೂ ತೀವ್ರತರವಾಗಿ ಸ್ವತಂತ್ರ ಭಾರತದ ಪ್ರಭುತ್ವವು ಹಿಂದೂ ಸಮುದಾಯಗಳಿಗೆ ಸಂಬಂಧಿಸಿದ ವೈಯುಕ್ತಿಕ ಕಾನೂನಿನ ವಿಷಯದಲ್ಲಿ ಅವರ ಆಚರಣೆಗಳನ್ನು ಮಾನ್ಯಮಾಡದೆ ಪ್ರಭುತ್ವವು ತನ್ನದೇ ವೈಯುಕ್ತಿಕ ಕಾನೂನುಗಳನ್ನು ಹೇರುತ್ತಾ ಬರುತ್ತಿದೆ. ಹಿಂದೂಗಳ ದೇವಾಲಯ ನಿರ್ವಹಣೆಯಿಂದ ಹಿಡಿದು, ಅವರ ಕೌಟುಂಬಿಕ ಜೀವನ ಪದ್ಧತಿ, ವಿವಾಹ, ವಿಚ್ಛೇಧನ, ಆಸ್ತಿ ಉತ್ತರಾಧಿಕಾರತ್ವ, ಆಸ್ತಿಯ ಹಕ್ಕಿನ ಸ್ವರೂಪ ಇತ್ಯಾದಿ ಎಲ್ಲಾ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಭುತ್ವವು ತನ್ನದೇ ಆದ ವೈಚಾರಿಕ ಕಾನೂನುಗಳನ್ನು ಮಾಡಿ ಅದನ್ನು ಹಿಂದೂ ಕಾನೂನೆಂದು ಜಾರಿಗೊಳಿಸುತ್ತಾ ಬಂದಿದೆ. ವಾಸ್ತವದಲ್ಲಿ ಇದೂ ಸಹ ಸೆಕ್ಯುಲರ್‌ವಾದದಡಿಯಲ್ಲಿ ಹಿಂದೂಗಳ ರಿಲಿಜನ್ನಿನ ಸ್ವಾತಂತ್ರ್ಯದ ಧಕ್ಕೆ ಎಂದೇ ಆಗುತ್ತದೆ.

ಮುಸ್ಲೀಮರಿಗೆ ವೈಯುಕ್ತಿಕ ಕಾನೂನಿಗೆ ಸಂಬಂಧಿಸಿದಂತೆಯೂ ಪ್ರಭುತ್ವದ ಮೂಲಕ ಕೆಲವು ಸುಧಾರಣೆಗಳು ನಡೆದವು. 20ನೇ ಶತಮಾನದ ಆರಂಭದಲ್ಲಿ ಭಾರತದ ಹಲವೆಡೆ ಮುಸ್ಲೀಮರಲ್ಲಿದ್ದ ಸ್ಥಳೀಯ ರೂಢೀಸಂಪ್ರದಾಯಗಳ ಆಚರಣೆಗಳನ್ನು ನಿಲ್ಲಿಸಿ, ಅವುಗಳ ಬದಲಿಗೆ ಷರಿಯಾವನ್ನು ಅನುಸರಿಸುವಂತೆ ಮಾಡುವ ಸಂಘಟಿತ ಪ್ರಯತ್ನಗಳು ದಿಯೋಬಂದ್‌ನ ಜಮಾತ್ ಅಲ್–ಉಲೇಮ–ಇ–ಹಿಂದ್ ನೇತೃತ್ವದಲ್ಲಿ ನಡೆದವು. ಕೇರಳದ ಮಾಪಿಳ್ಳಾ ಮುಸ್ಲೀಮರು, ಪಶ್ಚಿಮ ಭಾರತದ ಮೆಮೋನ್ ಮುಸ್ಲೀಮರು, ರಾಜಸ್ಥಾನ ಮತ್ತು ಪಂಜಾಬ್‌ನಲ್ಲಿದ್ದ ಹಲವು ಮುಸ್ಲೀಂ ಗುಂಪುಗಳಲ್ಲಿ ಚಾಲ್ತಿಯಲ್ಲಿದ್ದ ಸ್ಥಳೀಯ ವಿಶೇಷ ವಿವಾಹ ಮತ್ತು ಉತ್ತರಾಧಿಕಾರತ್ವ ಆಚರಣೆಗಳನ್ನು ಅನುಸರಿಸುತ್ತಿದ್ದು, ಅವನ್ನು ನ್ಯಾಯಾಲಯಗಳೂ ಮಾನ್ಯಮಾಡುತ್ತಿದ್ದವು. ನ್ಯಾಯಾಲಯಗಳು ಮುಸ್ಲೀಮರ ವ್ಯಾಜ್ಯಗಳಿಗೆ ಸ್ಥಳೀಯ ಆಚರಣೆಗಳನ್ನು ಅನುಸರಿಸುವುದು ಇಸ್ಲಾಂ ವಿರೋಧಿ ಎಂದು ಈ ಸಂಘಟನೆಗಳು ಹೋರಾಡಿದವು.

ಮುಸ್ಲೀಂ ಸಂಘಟಣೆಗಳ ಆಂದೋಲನದ ಪರಿಣಾಮವಾಗಿ ಮಾಪಿಳ್ಳಾ ಉತ್ತರಾಧಿಕಾರತ್ವ ಕಾಯ್ದೆ 1918, ಕುಚ್ಚಿ ಮೆಮೋನ್ಸ್ ಕಾಯ್ದೆ 1920 ಮತ್ತು 1938, NWFP ಮುಸ್ಲೀಂ ವೈಯುಕ್ತಿಕ ಕಾನೂನು (ಷರಿಯತ್) ಅನುಷ್ಠಾನ ಕಾಯ್ದೆ 1935 ಇತ್ಯಾದಿಗಳನ್ನು ಪ್ರಾಂತ್ಯ ಸರ್ಕಾರಗಳು ಜಾರಿಗೊಳಿಸಿದವು. ಕೇಂದ್ರ ಶಾಸಕಾಂಗವು ಸಹ 1937ರಲ್ಲಿ ಷರಿಯಾ ಕಾಯ್ದೆಯನ್ನು ಅನುಷ್ಠಾನ ಗೊಳಿಸಿತು. ಮಹಮದಾಲಿ ಜಿನ್ನಾರ ಒತ್ತಾಯದ ಮೇರೆಗೆ ಷರಿಯಾ ಅಥವಾ ಸ್ಥಳೀಯ ಪದ್ಧತಿಗಳನ್ನು ಅನುಸರಿಸುವ ಆಯ್ಕೆಯನ್ನೂ ಕಾಯ್ದೆಯಲ್ಲಿ ಇಡಲಾಗಿತ್ತು.

ಸಂವಿಧಾನ ರಚನಾ ಸಭೆಯ ಚರ್ಚೆಯಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಸಂವಿಧಾನದ ರಾಜ್ಯ ನಿರ್ದೇಶಕ ತತ್ವದಡಿಯಲ್ಲಿ ಸೇರಿಸುವ ಚರ್ಚೆ ನಡೆಯುತ್ತದೆ. ಆಗ ಮುಸ್ಲೀಂಲೀಗ್‌ನ ಹಲವು ಪ್ರತಿನಿಧಿಗಳು "ಮದುವೆ, ವಿಚ್ಛೇಧನ, ಮತ್ತು ಕೌಟುಂಬಿಕ ನಿರ್ವಹಣೆಯಂತ ವಿಷಯಗಳು ರಿಲಿಜನ್ನಿನ ಅತ್ಯಗತ್ಯ ಅಂಶಗಳಾಗಿರುವುದರಿಂದ ಅವುಗಳನ್ನು ಪ್ರಭುತ್ವದ ಹಸ್ತಕ್ಷೇಪದಿಂದ




ಮುಕ್ತವಾಗಿಡಬೇಕು. ಒಂದು ಸೆಕ್ಯುಲರ್ ವ್ಯವಸ್ಥೆ ಎಂದರೆ ಅಲ್ಲಿ ನಾಗರಿಕನಿಗೆ ತನ್ನ ರಿಲಿಜನ್ನಿನ ಬೋಧನೆಯಲ್ಲಿರುವಂತೆ ಬದುಕುವ ಸಂಪೂರ್ಣವಾದ ಸ್ವಾತಂತ್ರ್ಯವನ್ನು ನೀಡುವುದೇ ಆಗಿದೆ. ಸಾವಿರಾರು ವರ್ಷಗಳಿಂದ ವೈಯಕ್ತಿಕ ಕಾನೂನುಗಳ ಆಧಾರದ ಮೇಲೆ ಬದುಕುತ್ತಿರುವ ಮುಸ್ಲೀಮರ ಜೀವನಪದ್ಧತಿಯಲ್ಲಿ ಪ್ರಭುತ್ವವು ಹಸ್ತಕ್ಷೇಪ ಮಾಡಬಾರದು. ಸಮಾನ ನಾಗರಿಕ ಸಂಹಿತೆ ಹೆಸರಲ್ಲಿ ಮುಸ್ಲೀಮರ ವೈಯಕ್ತಿಕ ಕಾನೂನುಗಳಿಗೆ ಅಡ್ಡ ಬಂದರೆ ಅದು ಸೆಕ್ಯುಲರ್ ರಾಷ್ಟ್ರವಾಗಲು ಸಾಧ್ಯವಿಲ್ಲ" ಎಂದು ವಾದಿಸುತ್ತಾರೆ.

ಈ ವಾದವನ್ನು ತಿರಸ್ಕರಿಸುವ ಕೆ.ಎಮ್ ಮುನ್ಷಿಯವರು "ಎಲ್ಲಾ ಪ್ರಜಾಪ್ರಭುತ್ವ ಸರ್ಕಾರಗಳು ಸಮಾನ ನಾಗರಿಕ ಕಾನೂನು ಅಳವಡಿಸಿಕೊಂಡಿದೆ. ವೈಯಕ್ತಿಕ ಕಾನೂನು ಎಂಬುದಾಗಿ ಉಲ್ಲೇಖಿಸುತ್ತಿರುವ ಮದುವೆ, ವಿಚ್ಛೇಧನ ಮತ್ತು ಕೌಟಂಬಿಕ ನಿರ್ವಹಣೆಯ ವಿಷಯಗಳು ರಿಲಿಜನ್ನಿನ ಭಾಗವಾಗಿರದೆ ಸಾಮಾಜಿಕವಾಗಿರುವಂತಹದು" ಎಂದು ವಾದಿಸುತ್ತಾರೆ. ಇದಕ್ಕೆ ಆಕ್ಷೇಪಿಸುತ್ತಾ ಮುಸ್ಲೀಂಲೀಗ್ನ ನೇತಾರ ಇಸ್ಮಾಯಿಲ್ "ನಮ್ಮ ರಿಲಿಜನ್‌ನಲ್ಲಿ ನಿಖಾ ರಿಲಿಜಿಯಸ್ ಆಚರಣೆಯಾಗಿದ್ದರೆ ಬೇರೆ ರಿಲಿಜನ್‌ನಲ್ಲಿ ಅದು ಸೆಕ್ಯುಲರ್ ವಿಷಯಕ್ಕೆ ಬರುತ್ತದೆ. ಹೀಗಿರುವಾಗ ಸಮಾನ ನಾಗರಿಕ ಕಾನೂನು ಅಳವಡಿಸಿಕೊಳ್ಳಲು ಹೇಗೆ ಸಾಧ್ಯ? ಆದ್ದರಿಂದ ಪ್ರತಿಯೊಂದು ರಿಲಿಜಿನ್ನಿನ ವೈಯಕ್ತಿಕ ಕಾನೂನಿಗೆ ಮಾನ್ಯತೆ ಕೊಡಬೇಕು ಮತ್ತು ಸಂವಿಧಾನದ ವಿಧಿ 35 (ಈಗ 44) ರಲ್ಲಿ ಭಾರತದ ಭೂಪ್ರದೇಶದಾದ್ಯಂತ ಇರುವ ನಾಗರಿಕರಿಗೆ ಏಕರೂಪ ನಾಗರಿಕ ಸಂಹಿತೆಯನ್ನು ಖಾತರಿಪಡಿಸಲು ಪ್ರಭುತ್ವವು ಪ್ರಯತ್ನಿಸುತ್ತದೆ ಮತ್ತು ಅದರಲ್ಲಿ ವೈಯುಕ್ತಿ ಕಾನೂನು ಸಹ ಒಳಗೊಂಡಿರುತ್ತದೆ ಎನ್ನುವ ತಿದ್ದುಪಡಿಯನ್ನು ಸೇರಿಸಬೇಕು" ಎನ್ನುತ್ತಾರೆ.

ಆಗ ಚರ್ಚೆಗೆ ಪ್ರವೇಶಿಸುವ ಡಾ. ಅಂಬೇಡ್ಕರರು ಮುಸ್ಲೀಂಲೀಗ್‌ನ ವೈಯಕ್ತಿಕ ಕಾನೂನಿನ ಪ್ರಸ್ತಾವವನ್ನು ತಿರಸ್ಕರಿಸುತ್ತಾ "ಈ ದೇಶದಲ್ಲಿ ಈಗಾಗಲೇ ಏಕರೂಪ ಅಪರಾಧ ಸಂಹಿತೆ ಅಸ್ತಿತ್ವದಲ್ಲಿದೆ, ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ಆಸ್ತಿ ವರ್ಗಾವಣೆಯ ಕಾನೂನಿದೆ. ಮದುವೆ ಮತ್ತು ಉತ್ತರಾಧಿಕಾರ ಮಾತ್ರವೇ ಈ ನಾಗರಿಕ ಕಾನೂನಿಂದ ಇನ್ನೂ ಹೊರಗುಳಿದಿವೆ. ಅಲ್ಲದೆ ಸಾವಿರಾರು ವರ್ಷಗಳಿಂದ ಮುಸ್ಲೀಮರು ವೈಯುಕ್ತಿಕ ಕಾನೂನನ್ನು ಅನುಸರಿಸುತ್ತಿದ್ದಾರೆನ್ನುವುದು ವಾಸ್ತವವಲ್ಲ. ಮುಸ್ಲೀಂ ಬಾಹುಳ್ಯದ ವಾಯವ್ಯ ಪ್ರಾಂತ್ಯವೂ ಸೇರಿದಂತೆ ಸಂಯುಕ್ತ ಪ್ರಾಂತ್ಯ, ಕೇಂದ್ರ ಪ್ರಾಂತ್ಯ, ಬಾಂಬೆ, ಮಲಬಾರ್ ಪ್ರಾಂತ್ಯಗಳೆಲ್ಲೆಡೆ ಸಹ ಸ್ಥಳೀಯ ಹಿಂದೂ ಕಾನೂನುಗಳನ್ನೇ ಮುಸ್ಲೀಮರು ಅನುಸರಿಸುತ್ತಿದ್ದರು. ಇಲ್ಲೆಲ್ಲಾ ಮುಸ್ಲೀಮರು ಷರಿಯಾವನ್ನೇ ಅನುಸರಿಸುವಂತೆ ಮಾಡಲು 1937ರಲ್ಲಿ ಶಾಸನ ಮಾಡಲಾಯಿತು. ಹಾಗಾಗಿ ಪುರಾತನ ಕಾಲದಿಂದಲೂ ಮುಸ್ಲೀಮರು ಷರಿಯಾ ಕಾನೂನನ್ನೇ ಅನುಸರಿಸುತ್ತಿರುವುದರಿಂದ, ಏಕರೂಪ ನಾಗರಿಕ ಸಂಹಿತೆಯು ಅವರ ಆ ರಿಲಿಜನ್ನಿನ ಸ್ವಾತಂತ್ರ್ಯಕ್ಕೆ ಧಕ್ಕೆ ಎನ್ನುವುದು ಅವಾಸ್ತವ" ಎನ್ನುತ್ತಾರೆ.

ಅಂಬೇಡ್ಕರ್‌ರ ಪ್ರಕಾರ "ಏಕರೂಪ ನಾಗರಿಕ ಸಂಹಿತೆ ರೂಪಿಸಿದರೆ ಏಕಪಕ್ಷೀಯವಾಗಿ ಹೇರಬೇಕೆಂದೇನಿಲ್ಲ, ಯಾರಿಗೆ ಇಚ್ಛೆಯಿರುವುದೋ ಅವರಿಗೆ ಮಾತ್ರವೇ ಅನ್ವಯವಾಗುವಂತೆ ಶಾಸನ ಮಾಡುವ ಅವಕಾಶವಂತೂ ಭವಿಷ್ಯತ್ತಿನಲ್ಲಿ ಸಂಸತ್ತಿಗೆ ಇದ್ದೇ ಇದೆ. ಇಚ್ಛೆ ಇದ್ದವರು ಏಕರೂಪ ನಾಗರಿಕ ಸಂಹಿತೆ ಅನುಸರಿಸಲಿ ಇಲ್ಲದವರು ಅವರ ವೈಯುಕ್ತಿಕ ಕಾನೂನನ್ನೇ ಅನುಸರಿಸಲಿ" ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನ ರಚನಾ ಸಭೆಯು ವೈಯುಕ್ತಿಕ ಕಾನೂನಿಗೆ ಮಾನ್ಯತೆ ನೀಡಬೇಕು ಎನ್ನುವ ಮುಸ್ಲೀಂಲೀಗ್‌ನ ತಿದ್ದುಪಡಿಯನ್ನು ತಿರಸ್ಕರಿಸಿ, ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಸಬೇಕು ಎನ್ನುವ ವಿಧಿಯನ್ನು ಅಂಗೀಕರಿಸುತ್ತದೆ.

ಸ್ವತಂತ್ರ ಭಾರತದಲ್ಲಿ ಸಂವಿಧಾನ ರಚನಾ ಸಭೆಯ ಈ ನಿಲುವಿಗೆ ವ್ಯತಿರಿಕ್ತವಾಗಿ ಭಾರತೀಯ ಮುಸ್ಲೀಮರೆಲ್ಲರನ್ನೂ ಕಡ್ಡಾಯವಾಗಿ ಷರಿಯಾ ಕಾಯ್ದೆಯಡಿ ತರುವ ಪ್ರಯತ್ನ ಮುಂದುವರೆಯಿತು. ಫಲವಾಗಿ 1937ರ ಷರಿಯಾ ಕಾಯ್ದೆಯಲ್ಲಿ ನೀಡಲಾಗಿದ್ದ ಷರಿಯಾ ಅಥವಾ ಸ್ಥಳೀಯ ಪದ್ಧತಿಗಳನ್ನು ಅನುಸರಿಸುವ ಆಯ್ಕೆಯನ್ನು ಕೈಬಿಡಲಾಯಿತು. 1947ರ ನಂತರ ಹೊಸದಾಗಿ ಸೇರ್ಪಡೆಯಾದ ಎಲ್ಲಾ ಪ್ರಾಂತ್ಯಗಳಲ್ಲೂ ಷರಿಯಾವನ್ನೇ ಮುಸ್ಲೀಮರು ಅನುಸರಿಸುವುದನ್ನು ಕಡ್ಡಾಯಗೊಳಿಸಿ ಅನ್ವಯಿಸಲಾಯಿತು.

ಅದೇ ಹಿಂದೂಗಳಿಗೆ ಸಂಬಂಧಿಸಿದಂತೆ, ವಸಾಹತು ಪ್ರಭುತ್ವವೇ ತಂದಿದ್ದ ಹಲವು ಸುಧಾರಣೆಗಳ ಜೊತೆಗೆ ಸ್ವತಂತ್ರ ಭಾರತದ ಪ್ರಭುತ್ವದ ಕೇಂದ್ರ ಮತ್ತು ರಾಜ್ಯ ಶಾಸಕಾಂಗಗಳು ಹಲವಾರು ಸುಧಾರಣಾವಾದಿ ಕಾನೂನುಗಳನ್ನು ತರಲಾರಂಭಿಸಿದವು. ಈ ಆಧುನಿಕ ಸುಧಾರಣೆಗಳ ಶಾಸನಗಳೊಂದಿಗೆ 1955ರ ಹಿಂದೂ ವಿವಾಹ ಕಾಯ್ದೆ ಮತ್ತು 1956ರ ಆಸ್ತಿ ಉತ್ತರಾಧಿಕಾರತ್ವ ಕಾಯ್ದೆಗಳೆಲ್ಲವೂ ಸೇರಿಕೊಂಡು ಹಿಂದೂ ಕುಟುಂಬ ಪದ್ಧತಿಯ ಚೌಕಟ್ಟನ್ನೇ ಆಮೂಲಾಗ್ರವಾಗಿ ಬದಲಾಯಿಸಿದವು. ಈ ಸುಧಾರಣೆಗಳು ತೀವ್ರಗತಿಯಲ್ಲಿ ಅವಿಭಕ್ತ ಕುಟುಂಬಗಳ ನಾಶ ಮತ್ತು ವಿಭಕ್ತ ಕುಟುಂಬಗಳ ಹೆಚ್ಚಳಕ್ಕೆ ಚಾಲನೆಯನ್ನು ನೀಡಿದವು. ಹೀಗೆ ಪ್ರಭುತ್ವದ ಕಾನೂನುಗಳ ಮೂಲಕ ಹಿಂದೂ ವೈಯುಕ್ತಿಕ ಜೀವನ ಪದ್ಧತಿಯಲ್ಲಿ ಆಧುನಿಕ ಕಾಲದ ಅಗತ್ಯಗಳೆಂದು ಬದಲಾವಣೆಗಳನ್ನು ತರುವ ಹಿಂದೂ ಸುಧಾರಣಾ



ಕಾನೂನುಗಳ ಚಳುವಳಿಯೇ ಆರಂಭವಾಯಿತು. ಈ ಬದಲಾವಣೆಯ ತೀವ್ರತೆ ಎಷ್ಟಿತ್ತೆಂದರೆ ಹಿಂದೂ ಕಾನೂನಿನೊಳಗೆ 'ಹಿಂದೂ' ಎನ್ನುವ ಶಬ್ದವನ್ನೊಂದು ಹೊರತು ಪಡಿಸಿ ಹಿಂದೂ ಜೀವನಪದ್ಧತಿಗೆ ಸಂಬಂಧಪಟ್ಟ ಯಾವೊಂದೂ ಹಿಂದೂವಾಗಿ ಉಳಿದಿರಲಿಲ್ಲ.

ಪ್ರಭುತ್ವದ ಹಸ್ತಕ್ಷೇಪದ ಮೂಲಕ ಹಿಂದೂಗಳ ಧಾರ್ಮಿಕ ರೂಢಿಪದ್ಧತಿಯ ಆಚರಣೆಗಳನ್ನು ಬಿಟ್ಟುಕೊಟ್ಟು ವೈಚಾರಿಕ ನೆಲೆಗಟ್ಟಿನ ಸಾರ್ವತ್ರಿಕ ವೈಯುಕ್ತಿಕ ಕಾನೂನುಗಳನ್ನು ಅನುಸರಿಸುವಂತೆ ಮಾಡಲಾಯಿತು. ಅದೇ ಪ್ರಭುತ್ವದ ಅಧಿಕಾರದ ಮೂಲಕ ಮುಸ್ಲೀಮರು ಅವರ ಸ್ಥಳೀಯ ಸಾಂಪ್ರದಾಯಿಕ ಮತ್ತು


*4ನೇ ಪುಟಕ್ಕೆ...*

ಸಂಸ್ಮರಣೆ

# ಲೋಕಮಾನ್ಯ ಬಾಲಗಂಗಾಧರ ತಿಲಕ್

(23ನೇ ಜುಲೈ, 1856 – 1ನೇ ಆಗಸ್ಟ್, 1920)



ಭಾರತೀಯ ಮಾನಸದಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ ಜನ್ಮಜಾತ ಹೋರಾಟಗಾರ, ಸಮಾಜ ಸುಧಾರಕ ಹಾಗೂ ವಿದ್ವಾಂಸ ಬಾಲಗಂಗಾಧರ ತಿಲಕರು ಬಹುಶಃ ಭಾರತದ ಸ್ವಾತಂತ್ರ್ಯ ಹೋರಾಟ ಚಳುವಳಿಯ ಮೊದಲನೇ ಜನಪ್ರಿಯ ನಾಯಕ.

ಭಾರತೀಯರ ಪ್ರಜ್ಞೆಯಲ್ಲಿ ಸಂಪೂರ್ಣ ಸ್ವರಾಜ್ಯದ ಕಹಳೆ ಊದಿದವರು ತಿಲಕರು. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ" ಎಂಬ ಘರ್ಜನೆ ಅಂದು ಜನಪ್ರಿಯವಾದದ್ದಷ್ಟೇ ಅಲ್ಲ, ಇಂದಿಗೂ ಜನ ಸಾಮಾನ್ಯರ ನೆನಪಿನಲ್ಲಿ ಹಸಿರಾಗಿದೆ. 'ಲೋಕಮಾನ್ಯ' (ಜನಗಳ ಪ್ರೀತಿ ಪಾತ್ರರು / ಗೌರವಕ್ಕೆ ಪಾತ್ರರಾದವರು) ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ತಿಲಕರು ಭಾರತದ ಇತಿಹಾಸ, ಸಂಸ್ಕೃತ, ಹಿಂದೂ ಧರ್ಮ, ಗಣಿತ ಹಾಗೂ ಖಗೋಳ ಶಾಸ್ತ್ರಗಳ ಆಳವಾದ ಅಧ್ಯಯನ ಮಾಡಿದ್ದರು.

ತಿಲಕರು ಹುಟ್ಟಿದ್ದು 1856ರ ಜುಲೈ 23ರಂದು ಮಹಾರಾಷ್ಟ್ರದ ರತ್ನಾಗಿರಿಯ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ. ಚತುರ ವಿದ್ಯಾರ್ಥಿಯಾಗಿದ್ದ ತಿಲಕನಿಗೆ ಗಣಿತದಲ್ಲಿ ವಿಶೇಷ ಪ್ರತಿಭೆಯಿತ್ತು. ಆಧುನಿಕ ಕಾಲೇಜು ಶಿಕ್ಷಣ ಪಡೆದುಕೊಂಡ ಹೊಸ ಪೀಳಿಗೆಯ ಯುವಕರಲ್ಲಿ ತಿಲಕರೂ ಒಬ್ಬರಾಗಿದ್ದರು.


ವಿವಿಧತೆಯಲ್ಲಿ ಏಕತೆಯನ್ನು ಕಾಣುವ ರಾಷ್ಟ್ರ ತನ್ನ ವೈವಿಧ್ಯತೆಯಲ್ಲಿನ ಏಕತೆಯನ್ನು ಮರೆತು ಅಸಂಘಟಿತಗೊಂಡಿದ್ದಾಗ ಹಿಂದುಗಳನ್ನು ಒಗ್ಗೂಡಿಸುವುದಕ್ಕಾಗಿ ತಿಲಕರು ಗಣೇಶ ಚತುರ್ಥಿ ಮತ್ತು ಶಿವಾಜಿ ಜಯಂತಿಗಳ ಆಚರಣೆಗಳಿಗೆ ಸಾಮೂಹಿಕ ಸ್ವರೂಪವನ್ನಿತ್ತು ಅವುಗಳನ್ನು ರಾಜಕೀಯ ಜಾಗೃತಿಯ ಮಾಧ್ಯಮ–ವಾಗಿಸಿದರು. ಇದು ತಿಲಕರ ಒಂದು ಅದ್ವಿತೀಯ ಪ್ರತಿಭೋನ್ಮೀಲನ.

ತಿಲಕರು ಸ್ಥಾಪಿಸಿದ 'ಕೇಸರಿ', 'ಮರಾಠಿ' ಪತ್ರಿಕೆಯು ಬಹುಬೇಗ ಜನಸಾಮಾನ್ಯರ ಮನೆಮಾತಾಯಿತು. ಅಭಿಪ್ರಾಯ ಸ್ವಾತಂತ್ರ್ಯವನ್ನು, ಅದರಲ್ಲೂ ಮುಖ್ಯವಾಗಿ, 1905ರ ಬಂಗಾಳದ ವಿಭಜನೆಯ ವಿರೋಧವನ್ನು, ಸ್ವಾತಂತ್ರ್ಯ ಕಳೆದಿದ್ದ ಭಾರತೀಯ ನಾಗರಿಕರನ್ನು, ಸಂಸ್ಕೃತಿಯನ್ನು, ಪರಂಪರೆಯನ್ನು ಹೀಯಾಳಿಸುವ ಬ್ರಿಟಿಷ್ ಸಾಮ್ರಾಜ್ಯವನ್ನು ಅವರು ಕೇಸರಿಯ ಮಾಧ್ಯಮದಿಂದ ತೀವ್ರವಾಗಿ ಟೀಕಿಸುತ್ತಿದ್ದರು. ಭಾರತೀಯರಿಗೆ ಸ್ವರಾಜ್ಯದ ಹಕ್ಕನ್ನು ನೀಡಬೇಕೆಂದು ಅವರು ಪ್ರತಿಪಾದಿಸಿದರು. ತಿಲಕರ ಪ್ರಖರ ಬರಹಗಳಿಂದ ಅಸಂಖ್ಯಾತ ಯುವಕರು ಪ್ರೇರೇಪಣೆಗೊಂಡರು. 1890ರ ದಶಕದಲ್ಲಿ ತಿಲಕರು ಕಾಂಗ್ರೆಸ್ ಸೇರಿದರಾದರೂ, ಬಹುಬೇಗ ಸ್ವಾತಂತ್ರ ಹೋರಾಟದಲ್ಲಿ ಅದರ ಸೌಮ್ಯವಾದಿ ಧೋರಣೆಯ ವಿರೋಧಕರಾದರು. ಗೋಪಾಲ ಕೃಷ್ಣ ಗೋಖಲೆಯವರ ಸೌಮ್ಯವಾದಿ ನೀತಿಯ ಕಟು ಟೀಕಾಕಾರರಾದರು. ಇದರಲ್ಲಿ ತಿಲಕರಿಗೆ ಬಂಗಾಳದ ಬಿಪಿನ್ ಚಂದ್ರ ಪಾಲ್ ಹಾಗೂ ಪಂಜಾಬಿನ ಲಾಲಾ ಲಜಪತ ರಾಯ್‌ರ ಬೆಂಬಲವಿತ್ತು. 1907ರಲ್ಲಿ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ತಿಲಕ್, ಪಾಲ್ ಹಾಗೂ ರಾಯ್ ನೇತೃತ್ವದಲ್ಲಿ 'ಗರಂ ದಳ' (ಬಿಸಿ ಗುಂಪು) ಹಾಗೂ ಗೋಖಲೆಯವರ ನೇತೃತ್ವದಲ್ಲಿ 'ನರಂ ದಳ' (ಮೆದು ಗುಂಪು) ಎಂದು ಇಬ್ಭಾಗವಾಯಿತು.

ಸ್ವರಾಜ್ಯ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಜನಸಾಮಾನ್ಯರವರೆಗೆ ಕೊಂಡೊಯ್ದ ತಿಲಕರನ್ನು ಸ್ವಾತಂತ್ರ್ಯ ಚಳುವಳಿಯ ಜನಕ ಎಂದು ಪರಿಗಣಿಸಲಾಗಿದೆ. ಭಾರತೀಯ ಸಂಸ್ಕೃತಿ, ಇತಿಹಾಸ ಹಾಗೂ ಧರ್ಮದ ಬಗ್ಗೆ ಲೇಖನಗಳಿಂದ ಲಕ್ಷಾಂತರ ಭಾರತೀಯರಿಗೆ ತಮ್ಮ ಭವ್ಯ ಪರಂಪರೆಯ ಅರಿವು ಮಾಡಿಕೊಟ್ಟು, ಅವರ ಸ್ಮೃತಿಯಲ್ಲಿ ತಮ್ಮ ನಾಡಿನ ಬಗ್ಗೆ ಅಭಿಮಾನವನ್ನು ಮೂಡಿಸಿದರು. ತಿಲಕರನ್ನು ಭಾರತದ ರಾಜಕೀಯ ಹಾಗೂ ಆಧ್ಯಾತ್ಮಿಕ ನಾಯಕರನ್ನಾಗಿಯೂ, ಮಹಾತ್ಮ ಗಾಂಧಿಯವರನ್ನು ಇವರ ಉತ್ತರಾಧಿಕಾರಿಯಾಗಿಯೂ ಅನೇಕರು ಪರಿಗಣಿಸುತ್ತಾರೆ. 1920ರಲ್ಲಿ ತಿಲಕರು ತೀರಿಕೊಂಡಾಗ, ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ 2ಲಕ್ಷ ಜನರಲ್ಲಿ ಒಬ್ಬರಾದ ಮಹಾತ್ಮ ಗಾಂಧಿಯವರು ತಿಲಕರನ್ನು 'ಆಧುನಿಕ ಭಾರತದ ಜನಕ' ಎಂದು ಬಣ್ಣಿಸಿದರು.

1903ರಲ್ಲಿ ಬಾಲಗಂಗಾಧರ ತಿಲಕರು ಗ್ರಂಥವನ್ನು ಬರೆದು, ಅದರಲ್ಲಿ, ಖಗೋಳಶಾಸ್ತ್ರದ ಆಧಾರದ ಮೇಲೆ, ವೇದಗಳನ್ನು ಧ್ರುವ ಪ್ರದೇಶಗಳಲ್ಲಿ ಮಾತ್ರವೇ ಸೃಷ್ಟಿಸಿರಲು ಸಾಧ್ಯ ಎಂದು ವಾದಿಸುತ್ತಾರೆ. ಕೊನೆಯ ಮಂಜಿನ ಯುಗ ಶುರುವಾದ ಮೇಲೆ ಅಲ್ಲಿಂದ ದಕ್ಷಿಣದ ಕಡೆ ಸಾಗಿದ ಆರ್ಯರ ಮೂಲಕ ಅದು ದಕ್ಷಿಣ ದೇಶಗಳನ್ನು ಮುಟ್ಟಿತೆಂದೂ ಅವರು ಪ್ರತಿಪಾದಿಸುತ್ತಾರೆ. ವೇದಗಳ ಪ್ರಾಚೀನತೆಯ ಸಂಶೋಧನೆಗಳು ಎಂಬ ಪುಸ್ತಕದಲ್ಲಿ ವೇದ ಕಾಲದ ಜನರು ಕ್ರಿ.ಪೂ. 4ನೆಯ ಸಹಸ್ರಮಾನದಷ್ಟು ಹಿಂದೆಯೇ ಭಾರತದಲ್ಲಿ ನೆಲೆಸಿದ್ದರೆಂದು ಖಗೋಳಶಾಸ್ತ್ರದ ಆಧಾರದ ಮೇಲೆ ಪ್ರತಿಪಾದಿಸುತ್ತಾರೆ. ಬಾಲಗಂಗಾಧರ ತಿಲಕರ 'ಗೀತಾರಹಸ್ಯ ಅಥವಾ ಜೀವನಧರ್ಮ ಯೋಗ' ಎಂಬ ಭಗವದ್ಗೀತೆಯ ತಾತ್ಪರ್ಯವು ಬಹಳ ಪ್ರಸಿದ್ಧವಾದ ಕೃತಿ.

ಪುಸ್ತಕ ಪರಿಚಯ




## ಭಾರತೀಯ ಸ್ವಾತಂತ್ರ್ಯ ಸಂಗ್ರಾಮ

**ಲೇಖಕರು** : ನಾರಾಯಣ ಶೇವಿರೆ ಮತ್ತು ಎಂ.ಎನ್. ರವೀಂದ್ರ
**ಪ್ರಕಾಶನ** : ರಾಷ್ಟ್ರೋತ್ಥಾನ ಸಾಹಿತ್ಯ
**ಬೆಲೆ** : ರೂ. 100

ನಾರಾಯಣ ಶೇವಿರೆ ಮತ್ತು ಎಂ.ಎನ್. ರವೀಂದ್ರ ಅವರು ಬರೆದಿರುವ ಪುಸ್ತಕ 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮ'. ಈ ಪುಸ್ತಕದ ಉಪಶೀರ್ಷಿಕೆ 'ತಾತ್ವಿಕ ಭೂಮಿಕೆ; ಸಂಘರ್ಷದ ವಾರಸಿಕೆ'. 116 ಪುಟಗಳ ಈ ಸಣ್ಣ ಪುಸ್ತಕ ಸ್ವಾತಂತ್ರ್ಯ, ಸ್ವತ್ವ ಮುಂತಾದ ಪರಿಕಲ್ಪನೆಗಳ ಬಗ್ಗೆ ನಮ್ಮಲ್ಲಿ ಸ್ಪಷ್ಟತೆಯನ್ನು ತರುತ್ತದೆ. ಸ್ವಾತಂತ್ರ್ಯಕ್ಕಾಗಿ ನಡೆದ ಸಂಘರ್ಷದ ವಿವಿಧ ನೆಲೆಗಳ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತದೆ. ನಮ್ಮ ಸ್ವಾತಂತ್ರ್ಯ ಹೋರಾಟವೆಂಬುದು ನೂರೋ ಇನ್ನೂರೋ ವರ್ಷಗಳ ಸಂಘರ್ಷವಲ್ಲ. ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ನಡೆದುಹೋದ ಕ್ರಾಂತಿಯೂ ಅಲ್ಲ; ನಮ್ಮ ಸಂಸ್ಕೃತಿ–ಸಭ್ಯತೆಗಳ ಮೇಲೆ ಶತಶತಮಾನಗಳಿಂದ ನಿರಂತರ ನಡೆಯುತ್ತ ಬಂದಿರುವ ಪರಕೀಯರ ದಾಳಿ–ಆಕ್ರಮಣಗಳನ್ನು ದಿಟ್ಟವಾಗಿ ಎದುರಿಸಿ ನಿಂತ ಸುದೀರ್ಘ ಸಂಘರ್ಷ. ಇದು ಕೇವಲ ನಮ್ಮ ಭೌತಿಕ ಸಂಪತ್ತನ್ನು, ವ್ಯಾವಹಾರಿಕ ಗಡಿಗಳನ್ನು ರಕ್ಷಿಸಿಕೊಳ್ಳಲು ನಡೆದದ್ದಲ್ಲ; ಜೀವ–ಜಗತ್ತುಗಳನ್ನು ಕುರಿತ ಆತ್ಯಂತಿಕ ಸತ್ಯವನ್ನು, ಧರ್ಮವನ್ನು ಕಾಪಾಡಲು ನಡೆದದ್ದು. ಈ ನಿರಂತರ ಸಂಘರ್ಷವನ್ನು ವ್ಯಾವಹಾರಿಕ ಸಾಂಪ್ರತಿಕ ಕಾರಣಗಳನ್ನು ಮೀರಿದ ತಾತ್ವಿಕ ಸಂಗತಿಗಳು ಮುನ್ನಡೆಸಿವೆ. ನಮ್ಮದು ಮತವಿಸ್ತರಣೆಗಾಗಿ, ಗಡಿಯ ವಿಸ್ತರಣೆಗಾಗಿ, ಅಧಿಕಾರಸ್ಥಾಪನೆಗಾಗಿ, ಭೂಮಿ–ಸಂಪತ್ತುಗಳ ಒಡೆತನಕ್ಕಾಗಿ ನಡೆಸುತ್ತಿರುವ ಹೋರಾಟವಲ್ಲ; ಇದೆಲ್ಲವುಗಳಿಗಿಂತ ಮಿಗಿಲಾದ 'ಧರ್ಮ' ರಕ್ಷಣೆಗಾಗಿ ನಡೆಸುತ್ತಿರುವ ಹೋರಾಟ ಎನ್ನುವುದನ್ನು ಪುಸ್ತಕ ತಿಳಿಸಿದೆ. ಪುಸ್ತಕದ ಮೊದಲ ಭಾಗದಲ್ಲಿ ಸ್ವಾತಂತ್ರ್ಯದ ತಾತ್ವಿಕ ಭೂಮಿಕೆಯ ಬಗ್ಗೆ ಶೇವಿರೆಯವರ ಬರಹವಿದ್ದರೆ, ಎರಡನೆಯ ಭಾಗದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಸಂಘರ್ಷದ ವಾರಸಿಕೆಯ ಬಗ್ಗೆ ಎಂ. ಎನ್. ರವೀಂದ್ರ ಅವರು ಬರೆದ ಬರಹವಿದೆ. ಮೊದಲ ಭಾಗದಲ್ಲಿ ಹೇಳಿದುದು ನಮಗೆ ಸ್ಪಷ್ಟವಾದರೆ ಎರಡನೆಯ ಭಾಗದಲ್ಲಿ ಹೇಳಲಾದ ಅಂಶಗಳು, ಅಂದರೆ ಯಾರೆಲ್ಲ ಅಂತಹ ಸ್ವತ್ವಕ್ಕಾಗಿ ಸಂಘರ್ಷ ನಡೆಸಿದರು ಎನ್ನುವುದನ್ನು ಗುರುತಿಸುವುದು ಸುಲಭ.

ವೆಬ್ ಸೈಟ್: https://www.sahityabooks.com

ಎರ್ನೋ ಕೇಳಿದ ಕಥೆ

## ಪ್ರಬಲ ಇಚ್ಛಾಶಕ್ತಿ

ಒಮ್ಮೆ ಸೂರೂಜಿಯವರ ಆರೋಗ್ಯ ಸರಿಯಿರಲಿಲ್ಲ. ಮೂರು ದಿನಗಳಿಂದ ತೀವ್ರ ಜ್ವರ ಮತ್ತು ಕೆಮ್ಮು. ಹೈದರಾಬಾದಿನಲ್ಲಿ ವಿವೇಕಾನಂದರ ಕುರಿತಾದ ಪುಸ್ತಕ ಬಿಡುಗಡೆ ಕಾರ್ಯಕ್ರಮವಿತ್ತು. ಸೂರೂಜಿ ಹೋಗಬೇಕಿತ್ತು. "ಹೋಗುವುದು ಬೇಡ ಎಂದೆನಿಸುತ್ತದೆ" ಪರಮೇಶ್ವರ ಕೇಶವಕೃಪಾದ ಕಾರ್ಯಾಲಯ ಪ್ರಮುಖರಲ್ಲಿ ತನ್ನ ತಳಮಳ ತೋಡಿಕೊಂಡ. "ನಾನು ಮಾತನಾಡುತ್ತೇನೆ, ನೋಡೋಣ" ಎಂದರು ಕಾರ್ಯಾಲಯ ಪ್ರಮುಖರು. ಸೂರೂ ಅವರ ಕೋಣೆಗೆ ಬಂದರು. "ತುಂಬ ಜ್ವರ, ಕೆಮ್ಮು ಇದೆ. ಹೈದರಾಬಾದಿಗೆ ದೂರವಾಣಿ ಮಾಡಿ ತಿಳಿಸುತ್ತೇನೆ. ಅವರು ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ." ವಿನಂತಿಸಿಕೊಂಡರು. ಓಹೋ, ಪರಮೇಶ್ವರ ಬಂದು ಹೇಳಿದ್ನಾ! ಅವನು ನಿನ್ನೆಯಿಂದಲೇ ನನ್ನ ಪ್ರವಾಸ ರದ್ದುಪಡಿಸಲು ವಿವಿಧ ಯೋಜನೆಗಳನ್ನು ಮಾಡಿ ವಿಫಲನಾಗಿದ್ದಾನೆ. ಕೊನೆಯ ಪ್ರಯತ್ನವೆಂದು ನಿಮ್ಮ ಹತ್ತಿರ ಬಂದಿದ್ದಾನೆ. ಅವನ ತಂತ್ರ ಸಫಲವಾಗುವುದಿಲ್ಲ, ನಾನು ಹೋಗಲೇ ಬೇಕು ಏನೂ ಆಗುವುದಿಲ್ಲ. ಹೊಗ್ತರ್ತೀನಿ?" ಸೂರೂಜಿ ನಗುತ್ತಲೇ, ಆದರೆ ನಿರ್ಧಾರದ ಧ್ವನಿಯಲ್ಲಿ ಹೇಳಿದರು. ರೈಲು ಪ್ರಯಾಣದುದ್ದಕ್ಕೂ ಜ್ವರ, ಕೆಮ್ಮು. ಸೂರೂ ಅವರು ಪ್ರತಿಬಾರಿ ಕೆಮ್ಮಿದಾಗ, ಪರಮೇಶ್ವರನಿಗೆ ಬಹಳ ಸಂಕಟವಾಗುತ್ತಿತ್ತು. ಅಂತೂ ಇಂತೂ ಹೈದರಾಬಾದ್ ತಲಪಿದಾಗಲೇ ಅವನು ಸಮಾಧಾನದಿಂದ ಉಸಿರಾಡಿದ್ದು. ಅಲ್ಲಿನ ಕಾರ್ಯಕರ್ತರಿಗೆ ಸೂರೂ ಅವರ ಅನಾರೋಗ್ಯದ ಅರಿವಿಲ್ಲ. ಮರುದಿನ ಪತ್ರಿಕಾಗೋಷ್ಠಿ, ಪುಸ್ತಕ ಬಿಡುಗಡೆ ಮತ್ತು ಸ್ವಾಮಿ ವಿವೇಕಾನಂದರ ಕುರಿತು ಭಾಷಣ ಹೀಗೆ ಹಲವು ಕಾರ್ಯಕ್ರಮಗಳನ್ನು ಜೋಡಿಸಿದ್ದರು. ಇವೆಲ್ಲಕ್ಕೂ ಸೂರೂಜಿಯವರ ಪೂರ್ವಾನುಮತಿಯಂತೂ ಇದ್ದೇ ಇತ್ತು. ಪರಮೇಶ್ವರನಿಗೆ ಮತ್ತೆ ಕಳವಳ, ತಳಮಳ. ಏನಾಗುತ್ತೋ ಏನೋ ಎಂಬ ಚಿಂತೆ. ಆದರೆ ಆಶ್ಚರ್ಯ. ಮರುದಿನ ಬೆಳಗಾದಾಗ ಜ್ವರವೂ ಇಲ್ಲ. ಕೆಮ್ಮೂ ಇಲ್ಲ. ಎದುರು ಕುಳಿತ ಸಭಿಕರಿಗೆ ತನ್ನ ಅನಾರೋಗ್ಯದ ಸುಳಿವೂ ಸಿಗದಂತೆ ಸೂರೂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮ ಮುಗಿಸಿ ವಸತಿಗೆ ತಲಪಿದೊಡನೆ ಮತ್ತೆ ಜ್ವರ, ಕೆಮ್ಮು! ಬಹುಶಃ ಅವರ ಇಚ್ಛಾಶಕ್ತಿಗೆ ಶರಣಾಗಿ ಖಾಯಿಲೆ ಒಂದು ದಿನ ರಜೆ ತೆಗೆದುಕೊಂಡಿತ್ತೇನೋ ಎಂಬಂತೆ ಮರೆಯಾಗಿದ್ದ ಅದು ಇನ್ನಷ್ಟು ತೀವ್ರತೆಯೊಂದಿಗೆ ಪ್ರತ್ಯಕ್ಷವಾಗಿತ್ತು. ಇಚ್ಛಾಶಕ್ತಿಯಿದ್ದರೆ ಏನೂ ತಮ್ಮ ಕೆಲಸದಲ್ಲಿ ಅಡ್ಡಿ ಬರುವುದಿಲ್ಲ ಎಂಬುದನ್ನು ಸೂರೂರವರ ಪ್ರಬಲ ಇಚ್ಛಾಶಕ್ತಿಯ ಈ ಘಟನೆಯಿಂದ ತಿಳಿಯಬಹುದಿದೆ.

ಮೂಲ: ಉತ್ತುಂಗ

## ಸರ್ಕಾರಿ ಸೌಲಭ್ಯಗಳ ಸಮರ್ಪಕ ಬಳಕೆ ಮಾಡಿ ಲಾಭ ಪಡೆದ ಕೃಷಿಕ



ರಾಮದುರ್ಗ ತಾಲೂಕಿನ ಉದಪುಡಿ ಗ್ರಾಮದಲ್ಲಿನ ಮರಭೂಮಿಯಂತಹ ಭೂಮಿಯಲ್ಲಿ ಸರ್ಕಾರದ ಸೌಲಭ್ಯಗಳ ಸಮರ್ಪಕ ಬಳಕೆ ಮಾಡಿ ರೈತರೊಬ್ಬರು ಕೃಷಿಯಲ್ಲಿ ಖುಷಿಕಂಡಿದ್ದಾರೆ. ಗ್ರಾಮದ ರೈತ ಚನ್ನಪ್ಪ ಮುದಕಪ್ಪ ಎಲಿಶೆಟ್ಟಿ ಅವರು ತನ್ನ ಗ್ರಾಮದ ಕೊಳವೆ ಬಾವಿಯಲ್ಲಿ ಸಿಗುವ ಮೂರು ಇಂಚು ನೀರನ್ನು ಬಳಸಿಕೊಂಡು ತನ್ನ 3.29 ಎಕರೆ ಜಮೀನಿನಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳ ಮಾರ್ಗದರ್ಶನವನ್ನು ಪಡೆದು ಕೃಷಿ ಮಾಡಿದ್ದಾರೆ. ಇರುವ ನೀರಿನ ಸೌಲಭ್ಯದಲ್ಲಿ ನೀರನ್ನು ಹಾಯಿಸಿದರೆ ಉತ್ತಮ ಕೃಷಿಗೆ ಸಹಕಾರಿ ಆಗುವುದಿಲ್ಲ ಎನ್ನುವುದನ್ನು ಅರಿತು ಹನಿನೀರಾವರಿ, ತುಂತುರು ನೀರಾವರಿಯ ಮೂಲಕ ಹೆಚ್ಚು ಲಾಭ ಪಡೆಯುತ್ತಿದ್ದಾರೆ. ಇರುವಂತಹ ಭೂಮಿಯಲ್ಲಿ ನುಗ್ಗೆ, ಬಾಳೆ, ಮಾವು ಬೆಳದು ಅದರ ಅಡಿಯಲ್ಲೆ ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಹಸು, ಎತ್ತು, ಮೇಕೆ, ಎಮ್ಮೆ ಸಾಕಿಕೊಂಡು ಅವುಗಳಿಂದ ಬರುವ ಗೊಬ್ಬರವನ್ನೇ ಕೃಷಿಗೆ ಬಳಸುತ್ತಿದ್ದಾರೆ. ಇಷ್ಟಕ್ಕೇ ಸುಮ್ಮನಾಗದ ಚನ್ನಪ್ಪ ರೊಟ್ಟಿ ತಯಾರಿಸುವ ಯಂತ್ರವನ್ನೂ, ಸರ್ಕಾರದ ರಿಯಾಯ್ತಿ ದರದಲ್ಲಿ ಖರೀದಿಸಿ, ಗ್ರಾಮದ ಜನರ ಬೇಡಿಕೆಯಂತೆ ರೊಟ್ಟಿ ತಯಾರಿಸಿ ನೀಡುತ್ತಿದ್ದಾರೆ.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ವಿನಯ್ ಕೃಷ್ಣ ಹೆಚ್.ವಿ.

### ಶ್ರೀಲಂಕಾದಲ್ಲಿ ಡಿಜಿಟಲ್ ಶಿಕ್ಷಣ ಯೋಜನೆಯ ಅನುಷ್ಠಾನಕ್ಕೆ ಭಾರತ ನೆರವು



ಭಾರತ ಮತ್ತು ಶ್ರೀಲಂಕಾವು ಶ್ರೀಲಂಕಾದ ಗಾಲೆ ಜಿಲ್ಲೆಯಲ್ಲಿ ಡಿಜಿಟಲ್ ಶಿಕ್ಷಣ ಯೋಜನೆಯ ಅನುಷ್ಠಾನವನ್ನು ವೇಗಗೊಳಿಸಲು ನೋಡುತ್ತಿವೆ. ಶ್ರೀಲಂಕಾದಲ್ಲಿನ ಭಾರತದ ಹೈ ಕಮಿಷನರ್ ಗೋಪಾಲ್ ಬಾಗ್ಲೆ ಅವರು ಶ್ರೀಲಂಕಾದ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಎಂ.ಎನ್ ರಣಸಿಂಘೆ ಅವರೊಂದಿಗೆ 200 ಶಾಲೆಗಳಲ್ಲಿ ಕಸ್ಟಮೈಸ್ ಮಾಡಿದ ಪಠ್ಯಕ್ರಮ ಸಾಫ್ಟ್‌ವೇರ್ ಹೊಂದಿರುವ ಆಧುನಿಕ ಕಂಪ್ಯೂಟರ್ ಲ್ಯಾಬ್‌ಗಳು ಮತ್ತು ಸ್ಮಾರ್ಟ್ ಬೋರ್ಡ್‌ಗಳ ಸ್ಥಾಪನೆಯನ್ನು ತ್ವರಿತಗೊಳಿಸಲು ರಾಜತಾಂತ್ರಿಕ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಂಡರು. ಯೋಜನೆಯು ಭಾರತ ಸರ್ಕಾರದ ಅನುದಾನದಿಂದ ಬೆಂಬಲಿತವಾಗಿದೆ, ಹಿಂದುಳಿದ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

### ದೆಹಲಿಯ ಔರಂಗಜೇಬ್ ರಸ್ತೆ ಹೆಸರು ಮರುನಾಮಕರಣ




ದೆಹಲಿಯ ಐಷಾರಾಮಿ ಪ್ರದೇಶವಾದ ಲುಟ್ಯೆನ್ಸ್ ದೆಹಲಿಯಲ್ಲಿರುವ ಔರಂಗಜೇಬ್ ರಸ್ತೆಯನ್ನು, ಡಾ. ಎಪಿಜೆ ಅಬ್ದುಲ್ ಕಲಾಂ ರಸ್ತೆ ಎಂದು ಮರುನಾಮಕರಣ ಮಾಡಲಾಗಿದೆ. ಎನ್‌ಡಿಎಂಸಿ ಅಧಿಕಾರಿಗಳು ಈ ಆದೇಶವನ್ನು ಪ್ರಕಟಿಸಿದ್ದಾರೆ. ನವದೆಹಲಿ ಮುನ್ಸಿಪಲ್ ಕೌನ್ಸಿಲ್ ತನ್ನ ಸದಸ್ಯರ ಸಭೆಯಲ್ಲಿ ರಸ್ತೆಯ ಮರುನಾಮಕರಣಕ್ಕೆ ಅನುಮೋದನೆ ನೀಡಿತು.

### ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನು ಸ್ಥಾಪಿಸುವ ಮಸೂದೆಗೆ ಕೇಂದ್ರ ಸಂಪುಟ ಅನುಮೋದನೆ

ಸಂಸತ್ತಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ (National Research Foundation) ಸ್ಥಾಪನೆಗೆ ಕಾರಣವಾಗುವ ಮಸೂದೆಯನ್ನು ಪರಿಚಯಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಸಂಸತ್ತಿನ ಅನುಮೋದನೆಯ ನಂತರ, ಮಸೂದೆಯ ಪ್ರಕಾರ

## ಸಾಲುದ್ದದ ಸುದ್ದಿಗಳು

ಐದು ವರ್ಷಗಳ ಅವಧಿಯಲ್ಲಿ 50,000 ಕೋಟಿ ವೆಚ್ಚದಲ್ಲಿ NRF ಅನ್ನು ಸ್ಥಾಪಿಸಲಾಗುವುದು. ಇದು ಭಾರತದ ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಸಂಶೋಧನಾ ಕೇಂದ್ರ ಮತ್ತು ಆರ್&ಡಿಗೆ ಪ್ರೋತ್ಸಾಹ ನೀಡಲಿದೆ.

### ಭಾರತ್ 6G ಅಲಾಯನ್ಸ್ ಅನಾವರಣ




ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಸೋಮವಾರ ಭಾರತ್ 6G ಅಲೈಯನ್ಸ್ ಅನಾವರಣಗೊಳಿಸಿದರು. ಇದು ಭಾರತದಲ್ಲಿ ಮುಂದಿನ ಪೀಳಿಗೆಯ ತಂತ್ರಜ್ಞಾನವನ್ನು ಪ್ರಾರಂಭಿಸಲು ಹೊಸ ಉಪಕ್ರಮವಾಗಿದೆ. ಭಾರತ್ 6G ಅಲಯನ್ಸ್ ಸಾರ್ವಜನಿಕ ವಲಯ, ಖಾಸಗಿ ವಲಯ ಮತ್ತು ಇತರ ಇಲಾಖೆಗಳ ಒಕ್ಕೂಟವಾಗಿದ್ದು, ದೇಶದಲ್ಲಿ ಹೊಸ ಟೆಲಿಕಾಂ ತಂತ್ರಜ್ಞಾನ ಮತ್ತು 6G ಅಭಿವೃದ್ಧಿಗೆ ಕೆಲಸ ಮಾಡುತ್ತಿದೆ. 6G ತಂತ್ರಜ್ಞಾನಕ್ಕಾಗಿ ಭಾರತವು 200 ಪೇಟೆಂಟ್‌ಗಳನ್ನು ಪಡೆದುಕೊಂಡಿದೆ.

### ದೀಪಾವಳಿಗೆ ನ್ಯೂಯಾರ್ಕ್ ಶಾಲೆಗಳಿಗೆ ಸರ್ಕಾರಿ ರಜೆ ಘೋಷಣೆ

ಪ್ರಧಾನಿ ಮೋದಿ ಅಮೆರಿಕ ಪ್ರವಾಸ ಮುಗಿಸಿದ ಬೆನ್ನಲ್ಲೇ ನ್ಯೂಯಾರ್ಕ್ ಮೇಯರ್ ಎರಿಕ್ ಆಡಮ್ಸ್ ಮಹತ್ವದ ಘೋಷಣೆ ಮಾಡಿದ್ದಾರೆ. ನ್ಯೂಯಾರ್ಕ್ ಶಾಲೆಗಳಿಗೆ ದೀಪಾವಳಿ ಹಬ್ಬದಂದು ಸಾರ್ವತ್ರಿಕ ರಜೆ ಘೋಷಿಸಿದ್ದಾರೆ. ಸಾವಿರಾರು ನ್ಯೂಯಾರ್ಕ್ ನಿವಾಸಿಗಳು ಪ್ರತಿ ವರ್ಷ ದೀಪಾವಳಿಯನ್ನು ಆಚರಿಸುತ್ತಾರೆ.



ದೀಪಾವಳಿಯನ್ನು ರಜಾದಿನವನ್ನಾಗಿ ಮಾಡಲು ಹೋರಾಟದ ನೇತೃತ್ವ ವಹಿಸಿದ್ದ ನ್ಯೂಯಾರ್ಕ್ ಅಸೆಂಬ್ಲಿ ಸದಸ್ಯೆ ಜೆನಿಫರ್ ರಾಜ್‌ಕುಮಾರ್, ದಕ್ಷಿಣ ಏಷ್ಯಾ ಸಮುದಾಯದ ಎರಡು ದಶಕಗಳ ಹೋರಾಟದ ನಂತರ ಈ ಗೆಲುವು ಸಿಕ್ಕಿದೆ. ಇದಕ್ಕಾಗಿ ಹೆಮ್ಮೆಪಡುತ್ತೇನೆ ಎಂದು ಹೇಳಿದರು.

### SAFF ಚಾಂಪಿಯನ್ ಶಿಪ್: ಭಾರತ ಚಾಂಪಿಯನ್




ಭಾರತ ತಂಡವು 1993, 1997, 1999, 2005, 2009, 2011, 2015, 2021 ರಲ್ಲಿ SAFF ಚಾಂಪಿಯನ್ ಪಟ್ಟ ಅಲಂಕರಿಸಿತ್ತು. ಇದೀಗ ಬಲಿಷ್ಠ ಕುವೈತ್ ತಂಡವನ್ನು ಪೆನಾಲ್ಟಿ ಶೂಟೌಟ್ ನಲ್ಲಿ 5 – 4 ಗೋಲುಗಳಿಂದ ಸೋಲುಣಿಸಿ 9ನೇ ಬಾರಿ ಕಿರೀಟ ಮುಡಿಗೇರಿಸಿಕೊಂಡಿದೆ.



### ಆಗಸ್ಟ್‌ನಲ್ಲಿ ಎಥೆನಾಲ್ ಇಂಧನದ ವಾಹನಗಳ ಬಿಡುಗಡೆ

ಆಗಸ್ಟ್ ತಿಂಗಳಲ್ಲಿ ಸಂಪೂರ್ಣವಾಗಿ ಎಥೆನಾಲ್‌ನಿಂದ ಚಲಿಸುವ ವಾಹನಗಳನ್ನು ಬಜಾಜ್, ಟಿವಿಎಸ್ ಮತ್ತು ಹೀರೋ ಕಂಪನಿಯ ಬೈಕ್ ಮತ್ತು ಸ್ಕೂಟರ್‌ಗಳನ್ನು ಬಿಡುಗಡೆ ಮಾಡಲಾಗುವುದು. ಇವು ಶೇ. 100ರಷ್ಟು ಎಥೆನಾಲ್‌ನಲ್ಲೇ ಚಲಿಸುತ್ತವೆ. ಈ ಉಪಕ್ರಮವು ದೇಶದಲ್ಲಿ ಹೊಸತೊಂದು ಕ್ರಾಂತಿ ತರಲಿದೆ ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

# ಬ್ಯಾಂಕ್ ಉದ್ಯೋಗಿ ಅಮಿತ್ ಹಾಗೂ 3000 ಮಹಿಳೆಯರ ಬದುಕು ಹಸನಾಗಿಸಿದ ನೈಸರ್ಗಿಕ ಕೃಷಿ

ಪ್ರೇರಣಾ

ರಾಸಾಯನಿಕಯುಕ್ತ ಆಹಾರ ಹೆಚ್ಚುತ್ತಿರುವುದನ್ನು ಕಂಡು ಹಾಗೂ ಅದರ ದುಷ್ಪರಿಣಾಮಗಳನ್ನು ಆಲೋಚಿಸಿ 33 ವರ್ಷ ವಯಸ್ಸಿನ ಅಮಿತ್ ಕಿಶನ್ ಬೆಂಗಳೂರಿನ ಬ್ಯಾಂಕಿಂಗ್ ವಲಯದ ಕಾರ್ಪೊರೇಟ್ ಉದ್ಯೋಗವನ್ನು ತೊರೆದರು ಮತ್ತು ಸಾಂಪ್ರದಾಯಿಕ ಕೃಷಿಗೆ ಇಳಿದು ಆಹಾರವನ್ನು ಬೆಳೆಯುವ ಕಾಯಕದಲ್ಲಿ ತೊಡಗಿಕೊಂಡರು. ಸಾವಯವ ಮತ್ತು ತಾಜಾ ತರಕಾರಿಗಳು, ಬೇಳೆಕಾಳುಗಳು ಮತ್ತು ಡೈರಿ ಉತ್ಪನ್ನಗಳನ್ನು ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ಅಮಿತ್ ಹೆಬ್ಬೇವು ಫಾರ್ಮ್‌ಗಳನ್ನು ನಡೆಸುತ್ತಿದ್ದಾರೆ. ಸುಸ್ಥಿರತೆಯನ್ನು ಕೇಂದ್ರವಾಗಿಟ್ಟುಕೊಂಡು, ಅವರು ಪರಿಸರ ಸ್ನೇಹಿ ಪದ್ಧತಿಗಳನ್ನು ಅಳವಡಿಸಿಕೊಂಡು ಮತ್ತು ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಅವಲಂಬಿಸಿ ಪ್ಲಾಸ್ಟಿಕ್, ರಾಸಾಯನಿಕಗಳು ಮತ್ತು ಟ್ರ್ಯಾಕ್ಟರ್‌ಗಳ ಬಳಕೆಗಳನ್ನು ಸಂಪೂರ್ಣವಾಗಿ ಬದಿಗಿಟ್ಟಿದ್ದಾರೆ.

ದೇಸಿ ಹಸುವಿನ ಸಗಣಿ ಮತ್ತು ಗೋಮೂತ್ರವನ್ನು ಬಳಸುತ್ತೇವೆ, ನಾವು ಮಣ್ಣನ್ನು ಉಳುಮೆ ಮಾಡಲು ಮತ್ತು ಮರದ ಒತ್ತಿದ ಎಣ್ಣೆಯನ್ನು ತಯಾರಿಸಲು ಗೂಳಿಗಳನ್ನು ಬಳಸುತ್ತೇವೆ. ನಾವು ಸ್ಥಳೀಯ ಬೀಜಗಳನ್ನು ಬಿತ್ತುತ್ತೇವೆ ಮತ್ತು ಭೂಮಿ ತಾಯಿ ನಮಗೆ ಕೊಟ್ಟಿದ್ದನ್ನು ಮಾತ್ರ ಬೆಳೆಯುತ್ತೇವೆ. ಸ್ಥಳೀಯ ಕೃಷಿ ನಮ್ಮ ಕೃಷಿಯ ವಿಶಿಷ್ಟತೆಯಾಗಿದೆ "ಎಂದು ತಿಳಿಸಿದರು. ದೇಶೀಯ ತಳಿಯ ಬದನೆಕಾಯಿ ಮತ್ತು ಕಡಲೆಕಾಯಿಯಿಂದ ಗಂಗಾಭವಾನಿ ತೆಂಗಿನಕಾಯಿ, ಬಿಳಿ ಕಡಲೆ, ಮತ್ತು ಹುರುಳಿ, ಹೆಸರುಬೇಳೆ, ಉದ್ದಿನಬೇಳೆ ಮುಂತಾದ ಧಾನ್ಯಗಳು, ಡೈರಿ ಉತ್ಪನ್ನಗಳು ಮತ್ತು ತರಕಾರಿಗಳ ಜೊತೆಗೆ ಸುಮಾರು 40 ವಿಧದ ಆಹಾರ ಧಾನ್ಯಗಳು ಮತ್ತು ಸಸ್ಯಜನ್ಯ ಎಣ್ಣೆಗಳನ್ನು ಉತ್ಪಾದನೆ ಮಾಡುತ್ತಾರೆ. ಅವರು ಪ್ರತಿದಿನ ಆರು ಟನ್ ತರಕಾರಿಗಳು ಮತ್ತು 1,500 ಲೀಟರ್ ಹಾಲು ಮಾರಾಟ ಮಾಡುತ್ತಾರೆ. ಇಲ್ಲಿಯವರೆಗೆ, ಅವರು ಬೆಂಗಳೂರಿನ ಅಂಗಡಿ ಮತ್ತು ಅವರ ವೆಬ್‌ಸೈಟ್ ಮೂಲಕ 3 ಲಕ್ಷಕ್ಕೂ ಹೆಚ್ಚು ಗ್ರಾಹಕರನ್ನು ತಲುಪಿದ್ದಾರೆ. ಪ್ರತಿದಿನ ಸುಮಾರು 1,800 ಗ್ರಾಹಕರಿಗೆ ಹೆಬ್ಬೇವು ಫಾರ್ಮ್ಸ್ ಉತ್ಪಾದನೆಗಳನ್ನು ತಲುಪಿಸುತ್ತಿದ್ದಾರೆ.

> "ಕೃಷಿಯನ್ನು ಸುಸ್ಥಿರ ರೀತಿಯಲ್ಲಿ ಮಾಡಬೇಕು. ಕಳೆದ ನಾಲ್ಕು ವರ್ಷಗಳಿಂದ ಜೀರೋ ಬಜೆಟ್ ಕೃಷಿ ಪದ್ಧತಿ ಅನುಸರಿಸಿ ಅದರಲ್ಲಿ ಯಶಸ್ವಿಯಾಗಿದ್ದೇವೆ. ನಾವು ಎಲ್ಲವನ್ನೂ ನೈಸರ್ಗಿಕ ರೀತಿಯಲ್ಲಿ ಬೆಳೆಯುತ್ತೇವೆ ಮತ್ತು ದೀರ್ಘಾವಧಿಯಲ್ಲಿ ಮಣ್ಣು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ರಾಸಾಯನಿಕ ಗೊಬ್ಬರಗಳನ್ನು ಬಳಸುವುದಿಲ್ಲ"
>
> – ಅಮಿತ್ ಕಿಶನ್

ಕಾರ್ಪೊರೇಟ್ ಜಗತ್ತನ್ನು ತೊರೆದು ತನ್ನ ಅಜ್ಜನ ಹೆಜ್ಜೆಗಳನ್ನು ಅನುಸರಿಸಲು ಪ್ರೇರಣೆಯು ಅವರ ಹಿಂದಿನ ಕೆಲಸದ ಸಂದರ್ಭದಲ್ಲಿ ಕ್ಯಾನ್ಸರ್ ತಮ್ಮ ಗ್ರಾಹಕರನ್ನು ಕಳೆದುಕೊಂಡ ನಂತರ, ತಮ್ಮ ಜೀವನಶೈಲಿ ಮತ್ತು ಆಹಾರ ಪದ್ಧತಿಯನ್ನು ಸರಿಪಡಿಸಬೇಕಾಗಿದೆ ಎಂದು ಅನಿಸಿ ತಮ್ಮ ದೃಢ ನಿರ್ಧಾರವನ್ನು ತೆಗೆದುಕೊಂಡರು. 1.5 ಕೋಟಿ ಸಾಲ ಮತ್ತು 15 ಎಕರೆ ಕೃಷಿಭೂಮಿಯೊಂದಿಗೆ ಪ್ರಾರಂಭಿಸಿ, ಇಂದು ಅಮಿತ್ 650 ಎಕರೆ ಕೃಷಿಭೂಮಿಯಲ್ಲಿ ಹರಡಿರುವ ತನ್ನ ಕ್ಷೇತ್ರದಿಂದ ವಾರ್ಷಿಕ 21 ಕೋಟಿ ರೂಪಾಯಿ ಆದಾಯವನ್ನು ಗಳಿಸುತ್ತಾರೆ. 120 ಜನರ ತಂಡವನ್ನು ಹೊರತುಪಡಿಸಿ, ಅಮಿತ್ ಗ್ರಾಮೀಣ ಮಹಿಳೆಯರ ಸೈನ್ಯದೊಂದಿಗೆ ಕೆಲಸ ಮಾಡುತ್ತಾರೆ. ಇಲ್ಲಿಯವರೆಗೆ ಚಿನ್ನಮಂತೂರು, ಮಾವೂರು, ಪೆದ್ದಮಂತೂರು, ರೊದ್ದಂ, ಮಡಕಶಿರ ಸೇರಿದಂತೆ ಸಮೀಪದ 18 ಗ್ರಾಮಗಳ 3 ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಉದ್ಯೋಗ ಕಲ್ಪಿಸಿದ್ದಾರೆ. ತುಪ್ಪ, ಪನೀರ್ ಮತ್ತು ಇತರ ಡೈರಿ ಉತ್ಪನ್ನಗಳನ್ನು ತಯಾರಿಸಲು ಪ್ರತಿ ಮಹಿಳೆಗೆ ಪ್ರತಿದಿನ 25 ಲೀಟರ್ ಹಾಲನ್ನು ನೀಡಲಾಗುತ್ತದೆ. ನಮ್ಮ ಎ2 ದೇಸಿ ಹಸುವಿನ ಬಿಲೋನಾ ತುಪ್ಪವನ್ನು ಉತ್ಪಾದಿಸುವ ಪ್ರತಿ ಕಿಲೋಗ್ರಾಂಗೆ, ಗ್ರಾಮದ ಒಬ್ಬ ಮಹಿಳೆಗೆ



ನೇರ ಉದ್ಯೋಗಾವಕಾಶವಿದೆ. ಇದರಿಂದಾಗಿ ಅನೇಕ ಗ್ರಾಮೀಣ ಮಹಿಳೆಯರು ಸಬಲರಾಗಿದ್ದು, ಅಮಿತ್ ಅವರು ತಮ್ಮ ರೈತರಾಗುವ ನಿರ್ಧಾರವು ಅತ್ಯುತ್ತಮ ಆಯ್ಕೆಯಾಗಿದೆ ಎಂದು ಸಂತಸವ್ಯಕ್ತ ಪಡಿಸುತ್ತಾರೆ.

ಮೂಲ: ದಿ ಬೆಟರ್ ಇಂಡಿಯಾ

## ರಾಷ್ಟ್ರದ ಸಮುನ್ನತಿಗೆ ಸಂಪೂರ್ಣ ಸಮಾಜ ತೊಡಗಿಕೊಳ್ಳಲಿ: ಡಾ. ಮೋಹನ್ ಭಾಗವತ್

ಇಡೀ ಸಮಾಜ ರಾಷ್ಟ್ರದ ಒಳಿತನ್ನು ಬಯಸುವಂತಾಗಬೇಕು. ಅದಕ್ಕಾಗಿ ಅನುಶಾಸನ ಸ್ವೀಕಾರವಾಗಬೇಕು ಮತ್ತು ಈ ಕಾರ್ಯ ನಿರಂತರವಾಗಿರಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಹೇಳಿದರು.

ಬಳ್ಳಾರಿಯ ಸೊಂತಲಿಂಗಣ್ಣ ಕಾಲೋನಿಯಲ್ಲಿರುವ ವಿಜಯಭಾರತಿ ನೂತನ ಕಟ್ಟಡ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.




ಶುದ್ಧ ಸಾತ್ವಿಕ ಪ್ರೇಮವೇ ಸಮಾಜ ಸಂಘಟನೆಗೆ ಸ್ವಾಭಾವಿಕ ಆಧಾರವಾಗಿದೆ. ಪರಸ್ಪರ ಪ್ರೇಮ, ಸಹಬಾಳ್ವೆ ಪ್ರಾಚೀನದಿಂದಲೂ ಭಾರತೀಯರಲ್ಲಿ ಅಡಕವಾಗಿದೆ. ಭಾರತದ ಪ್ರಗತಿ ಕೇವಲ ಒಬ್ಬರ ಕೆಲಸವಲ್ಲ. ಆದರೆ, ಪ್ರತಿಯೊಬ್ಬರ ಕೊಡುಗೆಯೂ ಅವಶ್ಯ. ಪೂರ್ತಿ ಸಮಾಜ ತೊಡಗಿಕೊಂಡಾಗ ಭಾರತದ ಸಮುನ್ನತಿ ಸಾಧ್ಯ. ಕಳೆದ 98 ವರ್ಷಗಳಿಂದ ಸಂಘ ಕಾರ್ಯ, ಶಾಖೆ ಬೆಳೆದುಬಂದಿದೆ. ಆರೆಸ್ಸೆಸ್ ಒಂದು ಅನುಶಾಸನಬದ್ಧ ಸಂಘಟನೆ. ಇದರ ಪ್ರಮುಖ ಉದ್ದೇಶವೇ ಸಮಾಜದ ಸಂಘಟನೆ ಹಾಗೂ ಭಾರತದ ಪರಮ ವೈಭವ ಎಂದು ಹೇಳಿದರು.

ಯಾವುದೇ ಸತ್ಕಾರ್ಯಕ್ಕೆ ಸಾಧನಗಳು ಅವಶ್ಯ. ಅದೇ ರೀತಿ ಸಂಘ ಕಾರ್ಯಕ್ಕೆ ಕಾರ್ಯಾಲಯಗಳು ಸಾಧನಗಳಾಗಿವೆ. ಇಲ್ಲಿ ಸ್ವಯಂಸೇವಕರು ಸಾತ್ವಿಕ ಪ್ರೇಮ, ಆತ್ಮೀಯತೆ, ಅನ್ಯೋನ್ಯತೆ, ಪ್ರಾಮಾಣಿಕ ಹಾಗೂ ನಿಸ್ವಾರ್ಥ ಗುಣಗಳಿಂದ ಎಲ್ಲರೊಂದಿಗೆ ವ್ಯವಹರಿಸುತ್ತಾರೆ. ಅನ್ಯ ಸಂಘಟನೆಗಳು ದೇಶ ಹಾಗೂ ಸಮಾಜದ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತವೆ ಆದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಸ್ವಯಂಸೇವಕರು ಸಮಸ್ಯೆ ಜೊತೆ ಪರಿಹಾರ ಹುಡುಕುತ್ತಾರೆ. ಮಾತಿಗಿಂತ ಕೃತಿ ಲೇಸು ಎಂಬ ಮಾತಿಗೆ ತಕ್ಕಂತೆ ಕೆಲಸ ಮಾಡುತ್ತಾರೆ. ಇದಕ್ಕೆ ಉತ್ತಮ ನಿದರ್ಶನವೆಂದರೆ, ಕೊರೋನಾ ಸಂದರ್ಭದಲ್ಲಿ ಎಲ್ಲರೂ ಪರಿಸ್ಥಿತಿ ಅವಲೋಕಿಸುವ ಹಂತದಲ್ಲಿದ್ದರೆ, ಸ್ವಯಂಸೇವಕರು ಪರಿಹಾರ ಕಾರ್ಯದಲ್ಲಿ ತೊಡಗಿಕೊಂಡಿದ್ದರು ಆದರೆ ಬೇರೆ ದೇಶಗಳಲ್ಲಿ ಈ ರೀತಿ ಕಾರ್ಯ ಕಾಣಲಿಲ್ಲ ಎಂದು ಹೇಳಿದರು.

**ಸಂಘ ಕಾರ್ಯಕ್ಕೆ ಕಾರ್ಯಾಲಯಗಳು ಸಾಧನಗಳಾಗಿವೆ. ಇಲ್ಲಿ ಸ್ವಯಂಸೇವಕರು ಸಾತ್ವಿಕ ಪ್ರೇಮ, ಆತ್ಮೀಯತೆ, ಅನ್ಯೋನ್ಯತೆ, ಪ್ರಾಮಾಣಿಕ ಹಾಗೂ ನಿಸ್ವಾರ್ಥ ಗುಣಗಳಿಂದ ಎಲ್ಲರೊಂದಿಗೆ ವ್ಯವಹರಿಸುತ್ತಾರೆ.**
**– ಮೋಹನ್ ಭಾಗವತ್**

ವಸುಧೈವ ಕುಟುಂಬಕಮ್ ಎಂದು ನಮ್ಮ ಸಂಸ್ಕೃತಿ ಹೇಳುತ್ತದೆ. ಎಲ್ಲರನ್ನೂ ನಾವು ಸ್ವೀಕರಿಸುತ್ತೇವೆ. ದೇಶ ಹಾಗೂ ಸಮಾಜದಲ್ಲಿ ಯಾವುದೇ ವಿಪತ್ತು, ತೊಂದರೆ ಇದ್ದಲ್ಲಿ ಸ್ವಯಂಸೇವಕರು ನಿಸ್ವಾರ್ಥ ಬುದ್ಧಿಯಿಂದ, ಶೀಲಯುಕ್ತ, ಸ್ವಚ್ಛ ವ್ಯವಹಾರದಿಂದ ಹಾಗೂ ತನು–ಮನ–ಧನಗಳನ್ನು ಸಮರ್ಪಣೆ ಮಾಡಿ ಕಾರ್ಯನಿರ್ವಹಿಸುತ್ತಾರೆ. ಇದು ಉಳಿದವರಿಗೆ ಅನುಕರಣೀಯವೂ ಹೌದು. ಇದುವೇ ಸಂಘದ ನೀತಿಯಾಗಿದೆ. ಸ್ವಯಂಸೇವಕನ ಈ ಎಲ್ಲ ಗುಣಗಳು ರಾಷ್ಟ್ರಕಾರ್ಯದ ಸಕ್ರಿಯತೆಯನ್ನು ಇಮ್ಮಡಿಗೊಳಿಸುತ್ತದೆ ಎಂದು ಹೇಳಿದರು.

ವಿಜಯಭಾರತಿ ಟ್ರಸ್ಟ್ ಸಮಾಜದ ಪ್ರತಿಷ್ಠಿತ ಸಂಸ್ಥೆಯಾಗಿ ಸದಾ ಸಾಮಾಜಿಕ ಕಾರ್ಯದಲ್ಲಿ ಸಕ್ರಿಯವಾಗಿದೆ. ಇದರ ನೂತನ ಕಾರ್ಯಾಲಯ ಮುಂಬರುವ ರಾಷ್ಟ್ರಹಿತ ಹಾಗೂ ಸಾಮಾಜಿಕ ಕಾರ್ಯಗಳಿಗೆ ಪೂರಕವಾಗಲಿದೆ. ಈ ನೂತನ ಕಟ್ಟಡಕ್ಕೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳು ಎಂದು ಹೇಳಿದರು.

## ಧ್ಯೇಯಬದ್ಧರಿಂದ ಸಮಾಜ ಸುಭದ್ರ: ಡಾ.ಶ್ರೀನಿವಾಸ ಬಳ್ಳಿ

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮಾಧ್ಯಮ ಸಮಾಜದಲ್ಲಿ ಆರೋಗ್ಯಕರ ವಾತಾವರಣವನ್ನು ಮೂಡಿಸುವ ಅಸ್ತ್ರವಾಗಬೇಕಿತ್ತು. ಆದರೆ ಪ್ರಸ್ತುತ ಅದು ಧಾವಂತದಿಂದಾಗಿ ಅನೇಕ ವೈಪರಿತ್ಯಕ್ಕೆ ಎಡೆ ಮಾಡಿಕೊಡುತ್ತಿದೆ. ಇಂತಹ ಸಂದರ್ಭದಲ್ಲಿ ಮಾಧ್ಯಮಗಳು ಆದರ್ಶ ಪ್ರಧಾನವಾಗಿ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ ಎಂದು ಬೆಂಗಳೂರಿನ ನೃಪತುಂಗ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಶ್ರೀನಿವಾಸ ಬಳ್ಳಿ ಹೇಳಿದರು.

ರಾಜ್ಯದ ಸುದ್ದಿ ಸಂವಹನ ಸಂಸ್ಥೆ ವಿಶ್ವ ಸಂವಾದ ಕೇಂದ್ರ, ಕರ್ನಾಟಕ ವರ್ಷಂಪ್ರತಿ ನಾರದ ಜಯಂತಿಯ ಪ್ರಯುಕ್ತ ಪತ್ರಕರ್ತರಿಗೆ ಕೊಡಮಾಡುವ ವಿಎಸ್‌ಕೆ ಮಾಧ್ಯಮ ಪ್ರಶಸ್ತಿಯ 2023ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಅನೇಕ ಒತ್ತಡಗಳ ಮಧ್ಯೆಯೂ ಮೌಲ್ಯವನ್ನಿಟ್ಟುಕೊಂಡು ಕೆಲಸ ಮಾಡುವವರಿಗೆ ಸಮಾಜದಲ್ಲಿ ವಿಶೇಷವಾದ ಅಸ್ತಿತ್ವವಿದೆ ಹಾಗೂ ಅವರು ಗೌರವಿಸಲ್ಪಡುತ್ತಾರೆ. ಯಾವ ವ್ಯಕ್ತಿ ತನ್ನ ವೈಯಕ್ತಿಕ ಜೀವನದ ಜೊತೆಗೆ ಸಮಾಜದ ಕಾರ್ಯ ಮಾಡುತ್ತಾರೊ ಅವರನ್ನು ಗುರುತಿಸುವುದು ಸಮಾಜದ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ಪ್ರಶಸ್ತಿಗಾಗಿಯೋ, ಪ್ರಶಂಸೆಗಾಗಿಯೋ ಕೆಲಸ ಮಾಡುವುದಕ್ಕಿಂತ ಒಳ್ಳೆಯ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುವುದನ್ನು ತನ್ನ ಧ್ಯೇಯವೆಂದು ಭಾವಿಸಿ ಕಾರ್ಯನಿರ್ವಹಿಸುವವರಿಂದ ಸಮಾಜ ಕಟ್ಟುವ ಕೆಲಸವಾಗುತ್ತದೆ. ಸಾರ್ವಜನಿಕ ಜೀವನದಲ್ಲಿ ಉಳಿಯಬೇಕಾಗಿರುವುದು ಮೌಲ್ಯವೇ ಆಗಿದೆ ಎಂದರು.




ಈ ಬಾರಿ ತಿ.ತಾ.ಶರ್ಮಾ ಪತ್ರಿಕೋದ್ಯಮ ಪ್ರಶಸ್ತಿಯನ್ನು ಪ್ರಜಾವಾಣಿಯ ರವಿಪ್ರಕಾಶ್ ಎಸ್, ಸುವರ್ಣ ವಾಹಿನಿಯ ಜಯಪ್ರಕಾಶ್ ಶೆಟ್ಟಿ, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಯನ್ನು ಶಿವಮೊಗ್ಗದ ಅಜೇಯ ಪತ್ರಿಕೆಯ ಸಂಪಾದಕ ಎಂ. ಶ್ರೀನಿವಾಸನ್, ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿಯನ್ನು ಹೊಸದಿಗಂತದ ಅಂಕಣಕಾರ ಹೆಬ್ರಿ ಬಾಲಕೃಷ್ಣ ಮಲ್ಯ, ವಿಕ್ರಮ ವಾರಪತ್ರಿಕೆಯ ಅಂಕಣಕಾರ ಕಾ. ರಮಾನಂದ ಆಚಾರ್ಯ, ವಿ.ಎಸ್.ಕೆ. ಡಿಜಿಟಲ್ ಮಾಧ್ಯಮ ಪ್ರಶಸ್ತಿಯನ್ನು ಮೀಡಿಯಾ ಮಾಸ್ಟರ್ಸ್ ಸಂಪಾದಕ ಎಂ. ಎಸ್. ರಾಘವೇಂದ್ರ ಸ್ವೀಕರಿಸಿದರು.

## 'ಮೈಗ್ರೆಂಟ್ ಪಾಕ್ ಹಿಂದೂ ಡಾಕ್ಟರ್ಸ್ ಫೋರಂ' – ಸರಕಾರ್ಯವಾಹ ಭಾಗಿ



ಪಾಕಿಸ್ತಾನದಿಂದ ಭಾರತಕ್ಕೆ ಬಂದ ವೈದ್ಯರ ಸಂಘಟನೆಯಾದ ಮೈಗ್ರೆಂಟ್ ಪಾಕ್ ಹಿಂದೂ ಡಾಕ್ಟರ್ಸ್ ಫೋರಂ ವತಿಯಿಂದ ಗುಜರಾತ್‌ನ ಕರ್ಣಾವತಿಯಲ್ಲಿ ಕೃತಜ್ಞತಾ ಸಮಾರಂಭವನ್ನು ಜುಲೈ 3 ರಂದು ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಸಚಿವ ಡಾ. ಮನ್ಸುಖ್ ಮಾಂಡವಿಯಾ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಉಪಸ್ಥಿತರಿದ್ದರು

## ಸೆಕ್ಯುಲರ್‌ವಾದ, ಏಕರೂಪ ನಾಗರಿಕ ಸಂಹಿತೆ....

*1ನೇ ಪುಟದಿಂದ...*

ರೂಢಿಪದ್ಧತಿಗಳನ್ನು ಬಿಟ್ಟುಕೊಟ್ಟು ಸಾರ್ವತ್ರಿಕವಾಗಿ ಷರಿಯತ್ ಅಥವಾ ಮುಸ್ಲಿಂ ವೈಯುಕ್ತಿಕ ಕಾನೂನನ್ನೇ ಸ್ವೀಕರಿಸುವಂತೆ ಮಾಡಲಾಯಿತು. ಬಹುಮುಖ್ಯವಾಗಿ, ಸೆಕ್ಯುಲರ್ ತತ್ವದ ಪ್ರಕಾರ ರಿಲಿಜನ್ನಿನ ಸ್ವಾತಂತ್ರ್ಯವೆನ್ನುವುದು ವ್ಯಕ್ತಿಯ ವೈಯುಕ್ತಿಕ ಆಯ್ಕೆಯಾಗಿದ್ದು, ಅದೇ ಸಂವಿಧಾನದ ನೀತಿಯೂ ಸಹ. ಆದರೆ ಭಾರತೀಯ ಮುಸ್ಲೀಮರಿಗೆ ಇದು ವೈಯುಕ್ತಿಕ ಆಯ್ಕೆಯಾಗಿ ಲಭ್ಯವಿಲ್ಲ. ಅವರು ಮುಸ್ಲೀಮರಾಗಿದ್ದಾರೆ, ಹಾಗಾಗಿ ಷರಿಯವನ್ನೇ ಅವರು ಅನುಸರಿಸಬೇಕು, ಅಷ್ಟೆ. ಬೇರೆ ಆಯ್ಕೆಗಳೇ ಮುಸ್ಲೀಮರಿಗೆ ನಿಷಿದ್ಧ. ಅಂದಮೇಲೆ ಇಲ್ಲಿ ರಿಲಿಜನ್ನಿನ ಸ್ವಾತಂತ್ರ್ಯವನ್ನು ವೈಯುಕ್ತಿವಾಗಿ ಮುಸ್ಲಿಂ ನಾಗರಿಕನಿಗೆ ನೀಡಿಲ್ಲ, ಬದಲಿಗೆ ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದೆ. ಆ ಮೂಲಕ ಮುಸ್ಲಿಂ ವ್ಯಕ್ತಿಯಿಂದ ವೈಯುಕ್ತಿಕವಾದ ರಿಲಿಜನ್ನಿನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆ. ಅಲ್ಲಿಗೆ ಭಾರತದ ಪ್ರಭುತ್ವವು ಮುಸ್ಲೀಮರಿಗೆ ಇಸ್ಲಾಮಿಕ್ ಪ್ರಭುತ್ವವಾಗಿದೆಯೇ ಹೊರತು ಸೆಕ್ಯುಲರ್ ಪ್ರಭುತ್ವವಾಗಿ ಉಳಿದಿಲ್ಲ.

ಈ ಹಿನ್ನಲೆಯಲ್ಲಿ ಹಿಂದೂಗಳ ಜೀವನ ಪದ್ಧತಿಯನ್ನು ರಕ್ಷಿಸಿಕೊಳ್ಳಲು ಮತ್ತು ಮುಸ್ಲೀಮರ ವೈಯುಕ್ತಿಕ ರಿಲಿಜನ್ನಿನ ಸ್ವಾತಂತ್ರ್ಯವನ್ನು ನೀಡಲು ಇರುವ ಏಕೈಕ ಆಯ್ಕೆ ಎಂದರೆ ಡಾ. ಅಂಬೇಡ್ಕರರು ಪ್ರತಿಪಾದಿಸಿದಂತೆ ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸಿ ಅದನ್ನು ಎಲ್ಲರಿಗೂ ಆಯ್ಕೆಯನ್ನಾಗಿ ಇಡುವುದು. ಅಂದರೆ ಪ್ರಭುತ್ವದ ಕಾನೂನಾಗಿ ಏಕರೂಪ ನಾಗರಿಕ ಸಂಹಿತೆ ಮಾತ್ರವೆ ಇರಬೇಕು. ಮುಸ್ಲೀಮರಿಗೆ ಷರಿಯಾದ ಆಯ್ಕೆ ಇದೆ. ಆದರೆ ಕೋರ್ಟುಗಳಲ್ಲಲ್ಲ, ಅವರ ಮಸೀದಿಗಳಲ್ಲಿ, ಮೌಲ್ವಿಗಳಲ್ಲಿ ಮಾತ್ರ. ಹಾಗೆಯೇ ಹಿಂದೂಗಳಗೂ ಕೂಡ ಕೋರ್ಟುಗಳ ಮೂಲಕ ನಾಗರಿಕ ಸಂಹಿತೆಯನ್ನು ಅನುಸರಿಸುವ ಇಲ್ಲವೇ ತಮ್ಮ ಸ್ಥಳೀಯ ಕೌಟಂಬಿಕ ಪದ್ಧತಿಗಳಂತೆ ತಮ್ಮ ಇಷ್ಟದ ನ್ಯಾಯ ಪಂಚಾಯತಿಗಳಲ್ಲಿ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳುವ ಆಯ್ಕೆ ಮುಕ್ತವಾಗಿರಬೇಕು. ಹಾಗೆಯೇ ಮುಸ್ಲೀಮರಿಗೆ ಹಿಂದಿನ ಶತಮಾನಗಳಂತೆ ಸ್ಥಳೀಯ ಹಿಂದೂ ಪದ್ಧತಿಗಳನ್ನು ಅನುಸರಿಸುವ ಆಯ್ಕೆಯೂ ಇರಬೇಕು. ಅಲ್ಲಿಗೆ ಏಕರೂಪ ನಾಗರಿಕ ಸಂಹಿತೆಯಿಂದಾಗಿ ಅವರ ರಿಲಿಜನ್ನಿನ ಸ್ವಾತಂತ್ರ್ಯಕ್ಕೆ ಧಕ್ಕೆ ಎನ್ನುವ ಮುಸ್ಲಿಂ ಸಂಘಟನೆಗಳ ಆತಂಕಗಳಿಗೂ ಆಸ್ಪದವಿರುವುದಿಲ್ಲ, ಮುಸ್ಲೀ ನಾಗರಿಕರಿಗೂ ವೈಯುಕ್ತಿಕವಾದ ಮುಕ್ತ ಆಯ್ಕೆಯೂ ಲಭ್ಯ. ಜೊತೆಗೆ ಹಿಂದೂ ಜೀವನ ಪದ್ಧತಿಗಳೂ ತಮ್ಮ ಮೌಲ್ಯಗಳನ್ನು ಪುನರ್ಗಳಿಸಲು ಅವಕಾಶವಾಗುವುದು.

*(ಲೇಖಕರು: ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ)*

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.